**<u>ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್ ಸಿ, ಹುಬ್ಬಳ್ಳಿ.</u>**

**O.S. 171/2022** **PW: 1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 06.12.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಜಿ ಎಂ ವಕೀಲರಿಂದಃ**

ಈ ದಾವೆ ಮಾಡಲು ಮಾಹಿತಿಯನ್ನು ವಕೀಲರಿಗೆ ನಾನೇ ನೀಡಿರುತ್ತೇನೆ. 1982 ರಲ್ಲಿ ನನ್ನ ಮದುವೆಯಾಗಿದೆ. ಮದುವೆಯಾದ ನಂತರ ಮೊದಲು ಚಚಡಿ ಗ್ರಾಮದಲ್ಲಿದ್ದೆವು. ನಂತರ ನನ್ನ ಗಂಡ ಕೆ ಎಲ್ ಇ ಯಲ್ಲಿ ಆಂಬುಲೆನ್ಸ ಚಾಲಕ ಆದ ನಂತರ ಬೆಳಗಾವಿಗೆ ಹೋದೆವು. ಚಚಡಿ ಗ್ರಾಮದಲ್ಲಿ ನನ್ನಗಂಡನಿಗೆ ಸೇರಿದ ಆಸ್ತಿಗಳು ಬಹಳ ಇವೆ ಎಂದರೆ ಸರಿಯಲ್ಲ. ದೇಸಾಯಿ ಹೆಸರಿನಲ್ಲಿ ಭೂಮಿಗಳು ಇದ್ದವು ಅವುಗಳನ್ನು ನಾವು ಸಾಗುವಳಿ ಮಾಡುತ್ತಿದೆವು. ನನ್ನ ಗಂಡ ಮನೆತನದ ಹೆಸರು ಹೊಸಮನಿ. ತವರುಮನೆಯಲ್ಲಿ ಹುನಗುಂದ ಎಂದು ಕರೆಯುತ್ತಾರೆ. 1982 ರಲ್ಲಿ ಮದುವೆಯಾದ ನಂತರ ಹುನಗುಂದ ಕುಟುಂಬದಿಂದ ಹೊಸಮನೆ ಕುಟುಂಬಕ್ಕೆ ಹೋಗಿರುತ್ತೆನೆ ಎಂದರೆ ಸರಿ.

2. ನಾವು ಒಟ್ಟು 8 ಜನ ಮಕ್ಕಳಿದ್ದು 6 ಜನ ಗಂಡು ಮಕ್ಕಳು ಇಬ್ಬರೂ ಹೆಣ್ಣು ಮಕ್ಕಳು. ನನ್ನ ಅಕ್ಕ ಗಂಗವ್ವ. ಗಂಗವ್ವ ಮರಣಹೊಂದಿದ್ದರಿಂದ ಪಕ್ಷಗಾರರನ್ನಾಗಿ ಮಾಡಿಲ್ಲ. ಗಂಗವ್ವಳ ಮದುವೆಯಾದ ಬಗ್ಗೆ ನನಗೆ ಗೊತ್ತಿಲ್ಲ. ಗಂಗವ್ವಳಿಗೆ ಮದುವೆಯಾಗಿತ್ತು ಗಂಡ ಮತ್ತು ಇಬ್ಬರೂ ಮಕ್ಕಳು ಇದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಗಂಗವ್ವ ಮದುವೆಯಾಗದೇ ಮರಣ ಹೊಂದಿರುತ್ತಾರೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಗಂಗವ್ವ ಮದುವೆಯಾದ ಬಗ್ಗೆ ಎಲ್ಲಿದ್ದಾಳೆಂದು ನಾನು ವಿಚಾರಣೆ ಮಾಡಿಲ್ಲ. ಈ ದಾವೆಯಲ್ಲಿ ಗಂಗವ್ವಳನ್ನು ಸೇರಿಸಿದರೇ 1/8 ಅಂಶ ಸಿಗುತ್ತದೆ 1/7 ಅಂಶ ಅಲ್ಲ ಎಂದರೆ ಸರಿ. ಗಂಗವ್ವಳಿಗೆ ಹಿಸ್ಸೆ ಹೋಗಬಾರದು ಎಂದು ಬೇಕಂತಲೇ ಬಿಟ್ಟಿರುತ್ತೇನೆ ಎಂದರೆ ಸರಿಯಲ್ಲ. ಗಂಗವ್ವ ಮರಣ ಹೊಂದಿದ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ಗಂಗವ್ವಳ ವಾರಸುದಾರರ ಬಗ್ಗೆ ಗೊತ್ತಿಲ್ಲ.

3. ನನ್ನ ಗಂಡ ಆ್ಯಂಬುಲೆನ್ಸ ಡ್ರೈವರ ಅಂತ ನನ್ನ ಮದುವೆಯಾಗಿ 5-6 ವರ್ಷದ ನಂತರ ನೇಮಕ ಆಗಿರುತ್ತಾರೆ. ಅದು ಗುತ್ತಿಗೆ ಆಧಾರದ ಮೇಲೆ ನೇಮಕವಾಗಿರುತ್ತಾರೆ ಎಂದರೆ ಸರಿ. 500 ರೂ 1990 ರಲ್ಲಿ ಮಾಸಿಕ ವೇತನ ಇತ್ತು. ನನಗೆ ಇಬ್ಬರೂ ಗಂಡು ಮಕ್ಕಳು. ನಾನು , ಗಂಡ

ಮತ್ತು ಇಬ್ಬರೂ ಮಕ್ಕಳು ಬೆಳಗಾವಿಯಲ್ಲಿ ಜೀವನ ಮಾಡಲು ಹಣಕಾಸಿನ ತೊಂದರೆ ಇತ್ತು ಎಂದರೆ ಸರಿಯಲ್ಲ. ಬಾಡಿಗೆ ಹಣ ,ಉಪಜೀವನ ಮಕ್ಕಳ ವಿದ್ಯಾಭ್ಯಾಸಕ್ಕೆ ತವರುಮನೆಗೆ ಬಂದು ನನ್ನ ತಂದೆ ಹತ್ತಿರ ಹಣ ತೆಗೆದುಕೊಳ್ಳುತ್ತಿದ್ದೆ ಎಂದರೆ ಸರಿಯಲ್ಲ. ನನ್ನ ಮಕ್ಕಳು ಒಬ್ಬವ ಡಿಪ್ಲೊಮಾ ಮಾಡಿರುತ್ತಾನೆ ಒಬ್ಬ ನರಸಿಂಗ್ ಮಾಡಿರುತ್ತೆನೆ. ನನ್ನ ಮಕ್ಕಳ ವಿದ್ಯಾಭ್ಯಾಸಕ್ಕೆ ನನ್ನ ತಂದೆ ಹಣಕಾಸಿನ ಸಹಾಯ ಮಾಡಿರುತ್ತಾರೆಂದರೆ ಸರಿಯಲ್ಲ. ನನ್ನ ತಂದೆ ಮೃತಪಟ್ಟ ನಂತರ ತವರು ಮನೆಗೆ ಬಂದು ಅಣ್ಣಂದಿರ ಕಡೆಯಿಂದ ಹಣಕಾಸಿನ ಸಹಾಯ ಪಡೆಯುತ್ತಿದ್ದೆ ಎಂದರೆ ಸರಿಯಲ್ಲ. ನನ್ನ ಅಣ್ಣ ಬಸಪ್ಪ ಒಬ್ಬನು ಇದ್ದಾರೆ ಅವರು ಈಗ ಮರಣ ಹೊಂದಿರುತ್ತಾರೆ. ನನ್ನ ಅಣ್ಣ ಬಸಪ್ಪ ಸ್ವಲ್ಪ ಹಣ ತೆಗೆದುಕೊಂಡು ತನ್ನ ಹಿಸ್ಸೆಯನ್ನು ಹಕ್ಕು ಬಿಟ್ಟು ಪತ್ರದ ಮೂಲಕ ಬಿಟ್ಟು ಕೊಟ್ಟಿರುತ್ತಾರೆಂದರೆ ಸರಿಯಲ್ಲ. ಈ ವಿಷಯ ನನಗೆ ಗೊತ್ತಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈಗ ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿ ಬಸಪ್ಪ 1994 ರಲ್ಲಿ ಹಕ್ಕು ಬಿಟ್ಟು ಪತ್ರ ಬರೆದುಕೊಟ್ಟಿರುತ್ತಾರೆಂದರೆ ಅದು ಸುಳ್ಳು ಎಂದು ಉತ್ತರಿಸುತ್ತಾರೆ. ಬಸಪ್ಪ ಸಹಿ ಮಾಡಿರುವುದಿಲ್ಲ. ನಾನು ಸಹ ನನಗೆ ಹಕ್ಕು ಬೇಡ ಎಂದು ಹಣ ತೆಗೆದುಕೊಂಡು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ವಾದ ಪತ್ರವನ್ನು ತೋರಿಸಲಾಗಿ ಅದರಲ್ಲಿರುವ ಸಹಿ ತನ್ನದು ಎಂದು ಒಪ್ಪಿಕೊಳ್ಳುತ್ತಾರೆ. ಸಾಕ್ಷಿಗೆ ಕಾಗದ ಪತ್ರ ಓದಿ ಉತ್ತರಿಸು ಎಂದರೆ ಅದು ಸುಳ್ಳು ಇದೆ ಎನ್ನುತ್ತಾರೆ. ದಾಖಲೆಯಲ್ಲಿ ಗಿರಿಜಾ ಮಲ್ಲಿಕಾರ್ಜುನ ಹೊಸಮನಿ ಅಂತ ಸಹಿ ಮಾಡಿದ್ದು ನಾನೇ ಅಂದರೆ ಸರಿಯಲ್ಲ. ಈ ಕಾಗದಪತ್ರದ ಪ್ರಕಾರ ನಮ್ಮ ತಂದೆಯಿಂದ 2 ಲಕ್ಷ ಹಣ ಪಡೆದು ಬೆಳಗಾವಿಯಲ್ಲಿ ಪ್ಲಾಟ ಖರೀದಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಪ್ಲಾಟ ನನ್ನ ಗಂಡ ನನ್ನ ಹೆಸರಿನಲ್ಲಿ ಖರೀದಿ ಮಾಡಿರುತ್ತಾರೆ. ಅದೇ ಪ್ಲಾಟನಲ್ಲಿ ಮನೆ ಕಟ್ಟಿ ವಾಸವಾಗಿದ್ದೇವೆ ಎಂದರೆ ಸರಿ. ಮನೆ ಕಟ್ಟುವಾಗ ತವರುಮನೆಗೆ ಬಂದು ಹಣ ತೆಗೆದುಕೊಂಡು ಹೋಗುತ್ತಿದ್ದೀರಿ ಎಂದರೆ ಸರಿಯಲ್ಲ. ಹಣ ಪಡೆದು ಮನೆ ಕಟ್ಟಿದ್ದರೂ ಸಹ ಆಸ್ತಿ ಬೆಲೆ ಹೆಚ್ಚಾಗಿದ್ದರಿಂದ ಈ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದಾಖಲೆ ಮುಖಾಂತರ ನಾನು ಹಕ್ಕು ಬಿಟ್ಟುಕೊಟ್ಟಿದ್ದರಿಂದ ಪಾಲು ವಾಟ್ನಿ ದಾವೆ ಹಾಕಲು ಬರುವುದಿಲ್ಲ ಎಂದರೆ ಸರಿಯಲ್ಲ. ಈ ದಾವೆಯನ್ನು 2022 ರಲ್ಲಿ ಹಾಕಿದ್ದೇನೆ 2023 ರಲ್ಲಿ ಧಾರವಾಡದಲ್ಲಿ ನನ್ನ ತಾಯಿ ಆಸ್ತಿಯ ಮೇಲೆ ಹಾಕಿರುತ್ತೇನೆ. ಹೆಬ್ಬಳ್ಳಿಗ್ರಾಮದಲ್ಲಿರುವ ಮನೆ ನಮ್ಮ ಅಜ್ಜ ನನ್ನ ತಂದೆಗೆ ಭಕ್ಷಿಷ ಮಾಡಿರುತ್ತಾರೆ. ಭಕ್ಷಿಷ ಮಾಡಿದ್ದರಿಂದ ಅದು ನನ್ನ ತಂದೆಯ ಸ್ವಂತ ಆಸ್ತಿ ಎಂದರೆ ಸರಿ. ಗಬ್ಬೂರು ಗ್ರಾಮದಲ್ಲಿರುವ ಜಮೀನು ಕೆಲವು ಭಾಗ ಭೂಸ್ವಾಧಿನ ಆಗಿವೆ ಎಂದರೆ ಸರಿ. ಭೂಸ್ವಾಧೀನ ಹಣ ನ್ಯಾಯಾಲಯದಲ್ಲಿ ಠೇವಣಿ ಆಗಿದೆ ಎಂದರೆ ಸರಿ. ಇಲ್ಲಿಯವರೆಗೆ ನಾನು ಆ ಹಣದಲ್ಲಿ ಪಾಲು ಕೇಳಿಲ್ಲ ಎಂದರೆ ಸರಿಯಲ್ಲ. ಆ ದಾವೆಯಲ್ಲಿ ಕೇಳಿಲ್ಲ ಈ ದಾವೆಯಲ್ಲಿ ಕೇಳಿರುತ್ತೇನೆ. ನನ್ನ

ಗಂಡನ ಪಿ.ಎಫ ಹಣದಿಂದ ಬೆಳಗಾವಿಯಲ್ಲಿ ಪ್ಲಾಟ ಖರೀದಿ ಮಾಡಿರುತ್ತೇವೆ. ದಾಖಲೆ ಹಾಜರುಪಡಿಸಿಲ್ಲ. ನನ್ನ ಗಂಡನಿಗೆ ಪ್ಲಾಟ ಖರೀದಿ ಮಾಡುವ ಹಣಕಾಸಿನ ಸಾಮ್ಯರ್ಥ ಇರಲಿಲ್ಲ ಎಂದರೆ ಸರಿಯಲ್ಲ. ಗಂಗವ್ವಳನ್ನು ಪಕ್ಷಗಾರರನ್ನಾಗಿ ಮಾಡದ ಕಾರಣ ದಾವೆ ಊರ್ಜಿತ ಅಲ್ಲ ಎಂದರೆ ಸರಿಯಲ್ಲ. ಹಣ ಪಡೆದಿದ್ದರೂ ಸಹ ದಾವಾ ಆಸ್ತಿ ಹಕ್ಕು ಇಲ್ಲದಿದ್ದರೂ ಸಹ ಪ್ರತಿವಾದಿಗಳಿಗೆ ತೊಂದರೆ ಕೊಡಲು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.